64(197) : ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು (ಶಿವಾಜಿನಗರ): ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಬೆಂಗಳೂರಿನ ವಿಧಾನ ಸೌಧದ ಪಕ್ಕದಲ್ಲಿ ನಿರ್ಮಿಸುತ್ತಿರುವ ವಿಕಾಸ ಸೌದಕಾಗಿ ಇಲ್ಲಿಯವರೆಗೆ ಖರ್ಚಾದ ಹಣವೆಷ್ಟು;

ಆ) ಈ ವಿಕಾಸ ಸೌಧದ ನಿರ್ಮಾಣ ಕಾಮಗಾರಿಯು ಕರಾರು ಪ್ರಕಾರ ಎಂದು ಪೂರ್ಣಗೊಳ್ಳಬೇಕಾಗಿತ್ತು;

ಇ) ಈ ಕಟ್ಟಡದ ಎಲ್ಲಾ ಕಾಮಗಾರಿ ಪೂರ್ಣಗೊಂಡು ಎಂದಿನಿಂದ ಸರ್ಕಾರಿ ಕಛೇರಿಗಳನ್ನು ಈ ಹೊಸ ಕಟ್ಟಡಕ್ಕೆ ಸ್ಥಳಾಂತರಿಸಲಾಗುವುದು;

ಈ) ಈ ಕಟ್ಟಡಕ್ಕೆ ಬೇಕಾಗುವ ಪೀಠೋಪಕರಣ, ಇತ್ಯಾದಿಗಳನ್ನು ಒದಗಿಸಲು ಬೇಕಾಗುವ ಹಣವೆಷ್ಟು;

ಉ) ಈ ಹೊಸ ಕಟ್ಟಡಕ್ಕೆ ಯಾವ ಯಾವ ಸರ್ಕಾರಿ ಕಛೇರಿಗಳು ಸ್ಥಳಾಂತರವಾಗುತ್ತವೆ; (ವಿವರ ನೀಡುವುದು)?

ಶ್ರೀ ಹೆಚ್.ಡಿ. ರೇವಣ್ಣ (ಮಾನ್ಯ ಲೋಕೋಪಯೋಗಿ ಸಚಿವರು) :

ಅ) ಬೆಂಗಳೂರಿನ ವಿಧಾನ ಸೌಧದ ಪಕ್ಕದಲ್ಲಿ ನಿರ್ಮಿಸುತ್ತಿರುವ ವಿಕಾಸ ಸೌಧಕ್ಕೆ ಡಿಸೆಂಬರ್ 2004ರ ಅಂತ್ಯದವರೆಗೆ ರೂ. 98.00 ಕೋಟಿಗಳನ್ನು ವೆಚ್ಚ ಮಾಡಲಾಗಿದೆ.

ಆ) ಮೂಲ ಗುತ್ತಿಗೆ ಕರಾರಿನಂತೆ ಈ ಕಾಮಗಾರಿಯನ್ನು ದಿನಾಂಕ : 31.8.2004 ರೊಳಗೆ ಪೂರ್ಣಗೊಳಿಸಬೇಕಾಗಿತ್ತು.

ಇ) ಈ ಕಟ್ಟಡದ ಹೆಚ್ಚುವರಿ ಕಾಮಗಾರಿಗಳು ಪರಿಪೂರ್ಣಗೊಂಡ ನಂತರವೇ ಸರ್ಕಾರಿ ಕಛೇರಿಗಳನ್ನು ಈ ಹೊಸ ಕಟ್ಟಡಕ್ಕೆ ಸ್ಥಳಾಂತರಿಸಲಾಗುವುದು.

ಈ) ರೂ. 18.00 ಕೋಟಿಗಳು.

ಉ) ಈ ಕೆಳಕಂಡ ಇಲಾಖೆಗಳ ಸರ್ಕಾರಿ ಕಛೇರಿಗಳು ಸ್ಥಳಾಂತರಗೊಳ್ಳುತ್ತವೆ.

1) ಮುಖ್ಯ ಮಂತ್ರಿಗಳ ಕಛೇರಿಗಳು
2) ಕೃಷಿ ಮತ್ತು ತೋಟಗಾರಿಕೆ ಇಲಾಖೆ
3) ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆ
4) ಮೂಲ ಸೌಲಭ್ಯ ಅಭಿವೃದ್ಧಿ ಇಲಾಖೆ
5) ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆ
6) ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ
7) ಸಹಕಾರ ಇಲಾಖೆ
8) ಸಮಾಜ ಕಲ್ಯಾಣ ಇಲಾಖೆ
9) ಇಂಧನ ಇಲಾಖೆ
10) ವಸತಿ ಇಲಾಖೆ
11) ಜಲ ಸಂಪನ್ಮೂಲ ಇಲಾಖೆ
12) ಲೋಕೋಪಯೋಗಿ ಇಲಾಖೆ
13) ನಗರಾಭಿವೃದ್ಧಿ ಇಲಾಖೆ

14) ಕನ್ನಡ ಮತ್ತು ಸಂಸ್ಕೃತಿ ಇಲಾಖೆ

15) ಕಾರ್ಮಿಕ ಇಲಾಖೆ.

65 (104) ಶ್ರೀ ಬಸವರಾಜು ಎ. ಎಸ್ (ಅರಸೀಕೆರೆ) : ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರೈತರು ನೀರಾವರಿ ಸೌಲಭ್ಯಕ್ಕಾಗಿ ನಿರಂತರ ಗುಣಮಟ್ಟದ ವಿದ್ಯುತ್ ಪಡೆಯಲು ಸ್ವಂತ ಟ್ರಾನ್ಸ್ ಫಾರ್ಮರ್ ಅಳವಡಿಸುವ ಯೋಜನೆ ಯಾವ ಹಂತದಲ್ಲಿದೆ;

ಆ) ಇದರ ಕಾರ್ಯ ಯೋಜನೆಯ ವಿವರಗಳೇನು;

ಇ) ಈಗಾಗಲೇ ರಾಜ್ಯದಲ್ಲಿ ಎಷ್ಟು ಜನ ರೈತರು ಇದರ ಪ್ರಯೋಜನ ಪಡೆದಿದ್ದಾರೆ.

ಈ) ಇದಕ್ಕಾಗಿ ರೈತರು ನೀಡಬೇಕಾಗಿರುವ ಹಣ ಎಷ್ಟು ಹಾಗೂ ಇದರ ಮಾನದಂಡಗಳೇನು;

ಉ) ಈ ಟ್ರಾನ್ಸ್ ಫಾರ್ಮರ್ ಅಳವಡಿಕೆಗೆ ತಗಲುವ ವೆಚ್ಚವೆಷ್ಟು;

ಊ) ಕೆ.ಪಿ.ಟಿ.ಸಿ.ಎಲ್. ಎಷ್ಟು ಹಣ ನೀಡುತ್ತದೆ (ವಿವರ ನೀಡುವುದು);

ಋ) ಇದು ರೈತರಿಗೆ ಉಪಯೋಗಕ್ಕಿಂತ ತೊಂದರೆಯೇ ಹೆಚ್ಚು ಇದೆ ಎಂಬ ಬಗ್ಗೆ ಸರ್ಕಾರದ ನಿಲುವೇನು (ವಿವರ ನೀಡುವುದು);

ೠ) ಸದರಿ ಯೋಜನೆಯನ್ನು ರದ್ದುಪಡಿಸಲಾಗುವುದೇ ಅಥವಾ ಪುನಃ ಮುಂದುವರಿಸಲಾಗುವುದೇ?

ಶ್ರೀ ಹೆಚ್. ಡಿ. ರೇವಣ್ಣ (ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು) :

ಅ) ನೀರಾವರಿ ಪಂಪುಸೆಟ್ಟು ಬಳಕೆದಾರರ ಅನುಕೂಲಕ್ಕಾಗಿ ಮತ್ತು ಗುಣಮಟ್ಟದ ವಿದ್ಯುತ್ ಸರಬರಾಜಿಗಾಗಿ ಸರ್ಕಾರವು "ನಿಮ್ಮದೇ ಆದ ಸ್ವಂತ ಟ್ರಾನ್ಸ್‌ಫಾರ್ಮರ್ ಹೊಂದಿ" (ಓವೈಟಿ) ಯೋಜನೆಯನ್ನು ಈ ಹಿಂದೆ ದಿನಾಂಕ 21–10–2003ರ ಆದೇಶದ ಮೂಲಕ ಜಾರಿಗೆ ತಂದಿರುತ್ತದೆ. ಆದರೆ, ಈ ಯೋಜನೆಯಡಿ ವಿದ್ಯುತ್ ಸಂಪರ್ಕ ಪಡೆಯಲು ರೈತರಿಂದ ಅಂತಹ ಒಳ್ಳೆಯ ಪ್ರತಿಕ್ರಿಯೆ ಬಂದಿರುವುದಿಲ್ಲ.

ಆ) ಇದರ ಕಾರ್ಯ ಯೋಜನೆಯ ವಿವರಗಳು ಈ ಕೆಳಕಂಡಂತಿವೆ.

ಅ) ಹೊಸ 11 ಕೆ.ವಿ. ಹೆಚ್.ಟಿ. ಮಾರ್ಗವನ್ನು ವಿಸ್ತರಿಸಿ, ಹಾಗೂ 10/15 ಕೆ.ವಿ.ಎ ಸಾಮರ್ಥ್ಯದ ಟ್ರಾನ್ಸ್‌ಫಾರ್ಮರ್‌ನ್ನು ಅಳವಡಿಸಿ ಹೊಸ ನೀರಾವರಿ ಪಂಪುಸೆಟ್ಟು ಸ್ಥಾವರಗಳಿಗೆ ವಿದ್ಯುತ್ ಸಂಪರ್ಕವನ್ನು ಕಲ್ಪಿಸುವುದು.

ಆ) ಪ್ರತಿಯೊಂದು ನೀರಾವರಿ ಪಂಪುಸೆಟ್ಟಿಗೆ ಪ್ರತ್ಯೇಕವಾದ 10/15 ಕೆ.ವಿ.ಎ. ಸಾಮರ್ಥ್ಯದ ವಿತರಣಾ ಟ್ರಾನ್ಸ್‌ಫಾರ್ಮರ್‌ನ್ನು ಅಳವಡಿಸುವುದರಿಂದ , ರೈತರು ತಮ್ಮ ಪಂಪ್‌ಸೆಟ್ಟಿಗೆ ತಮ್ಮದೇ ಆದ ವಿತರಣಾ ಟ್ರಾನ್ಸ್‌ಫಾರ್ಮರ್‌ನ್ನು ಹೊಂದುವುದರ ಜೊತೆಗೆ, ಅನಧಿಕೃತ ನೀರಾವರಿ ಪಂಪುಸೆಟ್ಟುಗಳ ಬೆಳವಣಿಗೆಗೆ ಕಡಿವಾಣ ಹಾಕುವುದಕ್ಕೆ ಸಹಕಾರಿಯಾಗುತ್ತದೆ. ಅಲ್ಲದೇ, ವಿದ್ಯುತ್ತಿನ ಗುಣಮಟ್ಟದಲ್ಲಿ ಸುಧಾರಣೆ ಆಗುತ್ತದೆ. ಎಲ್.ಟಿ. ಲೈನ್ ವಿಸ್ತರಣೆ ಇರುವುದಿಲ್ಲ. ಕಡಿಮೆ ಅವಧಿಯಲ್ಲಿ ಪಂಪುಸೆಟ್ಟು ಹೆಚ್ಚಿನ ಪ್ರಮಾಣದಲ್ಲಿ ನೀರನ್ನು ಹಾಯಿಸುತ್ತದೆ.

ಇ) ರಾಜ್ಯದಲ್ಲಿ ಸದರಿ ಯೋಜನೆಯಡಿಯಲ್ಲಿ ತಮ್ಮ ನೀರಾವರಿ ಪಂಪುಸೆಟ್ಟುಗಳಿಗೆ ವಿದ್ಯುತ್ ಸಂಪರ್ಕ ಪಡೆದಿರುವ ರೈತರ ಒಟ್ಟು ಸಂಖ್ಯೆ 3155.